ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

೨

ಇಲಾಖೆ / ವಿಷಯ : DEPARTMENT / SUBJECT: ಸಭಾಪತಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE 19/2/2021

# ಶಾಲಾರಂಭಕ್ಕೆ ಸಕಾಲ

ಸಂ.ಕ. 19/2/21

ಹುಬ್ಬಳ್ಳಿ: ಫೆ. 22ರಿಂದ ಶಾಲೆಗಳನ್ನು ಆರಂಭಿಸಬೇಕೆನ್ನುವ ಸರ್ಕಾರದ ನಿರ್ಧಾರ ಅತ್ಯಂತ ಸೂಕ್ತವಾಗಿದೆ. ಶಾಲೆಗಳಲ್ಲಿದೇ ಇರುವುದರಿಂದ ಗ್ರಾಮೀಣ ಭಾಗಗಳಲ್ಲಿ ಮಕ್ಕಳು ಕೂಲಿ ಕೆಲಸ ಮಾಡುತ್ತಿದ್ದರು ಎಂದು ಸಭಾಪತಿ ಬಸವರಾಜ ಹೊರಟ್ಟಿ ಗುರುವಾರ ಪ್ರತಿಕ್ರಿಯಿಸಿದರು. ಶಾಲೆ ಆರಂಭದ ಕುರಿತು ಸಂಯುಕ್ತ ಕರ್ನಾಟಕದ ಪ್ರಶ್ನೆಗೆ ಉತ್ತರಿಸಿದ ಅವರು, ಇನ್ನೂ ಶಾಲೆಗಳನ್ನು ಆರಂಭಿಸದೇ ಇದ್ದರೆ ಮಕ್ಕಳು ಹಾಳಾಗುತ್ತಾರೆ ಎಂದು ಅಭಿಪ್ರಾಯಪಟ್ಟರು.



'ಎಷ್ಟೋ ಹಳ್ಳಿಗಳಲ್ಲಿ ಮಕ್ಕಳು ಕೂಲಿಗೆ ಹೋಗುವುದರ ಜೊತೆಗೆ, ಇದಕ್ಕೂ ಮಿಗಿಲಾದ ಅನಾಹುತಗಳನ್ನು ಎದುರಿಸುತ್ತಿದ್ದಾರೆ. ಹೇಗೂ ಶಾಲೆಗಳಿಲ್ಲವಲ್ಲ. ಮಗಳು ಮನೆಯಲ್ಲಿ ಕುಳಿತು ಏನು ಮಾಡುತ್ತಾಳೆ ಎಂದುಕೊಂಡು ಬಾಲ್ಯ ವಿವಾಹಗಳೂ ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಎಷ್ಟೋ ಕಡೆ ಈ ಕರಾಳ ಮುಖವನ್ನು ನಾವು ವಸ್ತುಸ್ಥಿತಿಯಲ್ಲಿ ಕಾಣುವಂತಾಗಿದೆ.

ಆದ್ದರಿಂದ ಇನ್ನು ಶಾಲೆಗಳನ್ನು ಬಂದ್ ಮಾಡಿ ಕೂರುವುದರಲ್ಲಿ ಅರ್ಥವೇ ಇಲ್ಲ' ಎಂದು ವಿಶ್ಲೇಷಿಸಿದರು.

ಹೇಗೂ ಶಾಲೆಯಿಲ್ಲ ಬಿಡು ಎನ್ನುವ ಸೋಂಬೇರಿ ಮನಸ್ಸುಗಳು ಸೃಷ್ಟಿಯಾಗುತ್ತವೆ. ಪರೀಕ್ಷೆ ಇಲ್ಲದೆ ಪಾಸ್ ಆಗುತ್ತೇವಲ್ಲ ಎನ್ನುವ ನಿರಂಕುಶ ಮನಸ್ಥಿತಿಯನ್ನು ಮಕ್ಕಳು ಬೆಳೆಸಿಕೊಳ್ಳುತ್ತವೆ. ಇದನ್ನು ತಪ್ಪಿಸುವುದು ನಮ್ಮೆಲ್ಲರ ಹೊಣೆಗಾರಿಕೆ. ಈ ದಿಸೆಯಲ್ಲಿ ಶಾಲಾ ಆರಂಭದ ನಿರ್ಣಯ ಸರಿಯಾದುದು ಎಂದು ಅವರು ನುಡಿದರು.